## ನೆಲಕಚ್ಚಿದೆ ಪ್ರವಾಸೋದ್ಯಮ, ಕ್ವಾರಂಟೈನ್‌ನಲ್ಲಿ ಯೂರೋಪ್

# ಎಲ್ಲಿಗೆ ಪಯಣ, ಏಕಾಂಗಿ ಸಂಚಾರಿ



ಚಳಿಯಿಂದ ಮೈ ಕೊಡವಿಕೊಳ್ಳುತ್ತಿರುವ ಯೂರೋಪ್ ದೇಶಗಳಲ್ಲೀಗ ಪ್ರವಾಸೋದ್ಯಮ ಕಾವು ಶುರುವಾಗಬೇಕಿತ್ತು. ವಿಶ್ವ ಪ್ರವಾಸಿಗರ ಭೇಟಿಯಿಂದ ಯೂರೋಪಿನ ನಗರಗಳು ಗಿಜಿಗುಟ್ಟಬೇಕಾಗಿತ್ತು. ಆದರೆ, ಕೊರೊನಾದ ನೆರಳಿನಲ್ಲಿ ಪ್ರವಾಸೋದ್ಯಮ ಕ್ಷೇತ್ರ ಕಳೆಗುಂದಿದೆ. ಪ್ರವಾಸೋದ್ಯಮ ಕ್ಷೇತ್ರದ ಈ ಸ್ಥಿತ್ಯಂತರವನ್ನು ನೆದರ್‌ಲ್ಯಾಂಡ್ ನಿವಾಸಿ ಚೈತ್ರ ಎಲ್. ಹೆಗಡೆ 'ಸುಧಾ'ಕ್ಕಾಗಿ ನಿರೂಪಿಸಿದ್ದಾರೆ.

ಯೂರೋಪ್ ವಿಶ್ವ ಪ್ರವಾಸಿಗರಿಗೆ ಸ್ವರ್ಗತಾಣ. ಬೆಲ್ಜಿಯಂನಲ್ಲಿ ಉಪಾಹಾರ, ನೆದರಲ್ಯಾಂಡ್‌ನಲ್ಲಿ ಮಧ್ಯಾಹ್ನದ ಊಟ ಮಾಡಿ, ಜರ್ಮನಿಯಲ್ಲಿ ಡಿನ್ನರ್ ಮಾಡುವ ಪ್ರವಾಸಿಗರಿದ್ದಾರೆ. ಏಕಾಂತಕ್ಕೆಂದೇ ಇರುವ ಪುಟ್ಟ ಪುಟ್ಟ ದ್ವೀಪಗಳು, ಟ್ರೆಕ್ಕಿಂಗ್‌ಗಾಗಿಯೇ ಇರುವ ಗುಡ್ಡ ಪ್ರದೇಶಗಳು, ಇತಿಹಾಸದ ಪುಟಗಳನ್ನು ತೆರೆದಿಡುವ ದೇಶಗಳು, ಯುವ ಹೃದಯಗಳ ಭರಪೂರ ಮನರಂಜನೆಗೆಂದೇ ಹಲವು ಪ್ರದೇಶಗಳು ಯೂರೋಪ್‌ನಲ್ಲಿವೆ. ಒಂದೇ ವೀಸಾದಡಿ ಯೂರೋಪ್ ಸುತ್ತಾಡುವ ಅವಕಾಶ.

ಯೂರೋಪಿನ ಬಹುತೇಕ ರಾಷ್ಟ್ರಗಳು ಘನಘೋರ ಚಳಿಗಾಲದಿಂದ ಮೈಕೊಡವಿಕೊಳ್ಳುವ ಸಂದರ್ಭವಿದು. ಈ ಹೊತ್ತಿನಲ್ಲಿ ಸಮುದ್ರ ತಟದಲ್ಲಿ ಸೂರ್ಯಸ್ನಾನಕ್ಕೆ ಹೋಗುವವರ ದೊಡ್ಡ ದಂಡೇ ಇರುತ್ತಿತ್ತು. ಗುಡ್ಡಗಾಡುಗಳಲ್ಲಿ ಟ್ರೆಕ್ಕಿಂಗ್‌ಗಾಗಿ ತೆರಳುವವರ ಹಾಗೂ ಸಾಹಸ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆಯೂ ಕಡಿಮೆ ಇರುತ್ತಿರಲಿಲ್ಲ. ಮ್ಯೂಸಿಯಂ, ಸ್ಮಾರಕಗಳು, ನಾಟಕ ಮಂದಿರಗಳಲ್ಲೆಲ್ಲ ಪ್ರವಾಸಿಗರದ್ದೇ ಪಾರುಪತ್ಯದ ಸಮಯ ಇದಾಗಿರಬೇಕಿತ್ತು. ಪಬ್‌ಗಳು, ನೈಟ್ ಕ್ಲಬ್‌ಗಳು ತರುಣ ತರುಣಿಯರಿಂದ ತುಂಬಿ ತುಳುಕಬೇಕಿತ್ತು. ವಿಪರ್ಯಾಸ ನೋಡಿ, ಇದೆಲ್ಲ ಸಂಭ್ರಮಕ್ಕೆ 'ಕೋವಿಡ್ 19' ತೆರೆ ಎಳೆದಿದೆ.

ಉತ್ತುಂಗದಲ್ಲಿ ತೇಲಾಡುತ್ತಿದ್ದ ಪ್ರವಾಸೋದ್ಯಮ ಕೊರೊನಾ ಕಾರಣದಿಂದಾಗಿ ಒಮ್ಮೆಲೆ ನೆಲಕಚ್ಚಿದೆ. ಪ್ರವಾಸಿಗರನ್ನು ಹೊತ್ತು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹಾರುತ್ತಿದ್ದ ವಿಮಾನಗಳು ನೆಲ ಬಿಟ್ಟು ಏಳುತ್ತಿಲ್ಲ. ನೀರಿನ ಮಧ್ಯೆ ಸದಾ ತೇಲುತ್ತಿದ್ದ ದೋಣಿಗಳು ದಡಕ್ಕಂಟಿ ಕೂತಿವೆ. ಅಲ್ಲೊಂದು ಇಲ್ಲೊಂದು ಓಡಾಡುತ್ತಿರುವ ಟ್ರೇನ್, ಮೆಟ್ರೊ, ಬಸ್‌ಗಳು ಪಯಣಿಗರಿಲ್ಲದೇ ಪರಿತಪಿಸುತ್ತಿವೆ. ಪ್ರವಾಸಿಗರಿಂದ ಸದಾ ಗಿಜಿಗುಡುತ್ತಿದ್ದ ನಿಲ್ದಾಣಗಳೆಲ್ಲ ಬಿಕೋ ಎನ್ನುತ್ತಿವೆ.

### ಹೋಟೆಲ್ ಉದ್ಯಮಕ್ಕೆ ಅಪೌಷ್ಟಿಕತೆ

ಹೋಟೆಲ್ ಉದ್ಯಮದ ಪ್ರಮುಖ ಆದಾಯದ ಸೆಲೆಯೆಂದರೆ ಪ್ರವಾಸೋದ್ಯಮ.